## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಜವಾಹರ್ ನವೋದಯ ವಿದ್ಯಾಲಯ ನಿರ್ವಹಣಾ ಸಮಿತಿ ಮಾದರಿಯಲ್ಲಿ ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯನ್ನು ರಚಿಸುವ ಬಗ್ಗೆ

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಸಕಇ 316 ಮೊದೇಶಾ 2020, ದಿನಾಂಕ:16.10.2020
2. ಕಾರ್ಯನಿರ್ವಾಹಕ ನಿರ್ದೇಶಕರು , ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರ ಪತ್ರ ಸಂಖ್ಯೆ: ಕವಶಿಸಸ/ ಶಿಕ್ಷಣ / ಸಿಆರ್-60/ 2019-20, ದಿನಾಂಕ:13-10-2021

******

**ಪ್ರಸ್ತಾವನೆ:-**

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ದಿನಾಂಕ: 16.10.2020 ರ ಆದೇಶದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ರಚಿಸಿ ಆದೇಶಿಸಲಾಗಿತ್ತು.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ದಿನಾಂಕ: 13.10.2021 ರ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರು ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳನ್ನು ಜವಾಹರ್ ನವೋದಯ ವಿದ್ಯಾಲಯ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಈಗಾಗಲೇ ಮಾನ್ಯ ಸಚಿವರು, ಅಧಿಕಾರಿಗಳು, ಸಂಘದ ಸಭೆಗಳಲ್ಲಿ ಹಲವಾರು ಬಾರಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಜವಾಹರ್ ನವೋದಯ ವಿದ್ಯಾಲಯ ಶಾಲೆಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ವಿದ್ಯಾಲಯ ನಿರ್ವಹಣಾ ಸಮಿತಿಗಳ ಸಮರ್ಥ ನಿರ್ವಹಣೆಯಿಂದಾಗಿ ನವೋದಯ ವಿದ್ಯಾಲಯ ಶಾಲೆಗಳು ಅತ್ಯುತ್ತಮ ಫಲಿತಾಂಶವನ್ನು ಗಳಿಸುತ್ತಿರುತ್ತವೆ. ಆದ್ದರಿಂದ, ಇದೇ ಮಾದರಿಯಲ್ಲಿ ಸಂಘದ ವಸತಿ ಶಾಲೆ/ ಕಾಲೇಜುಗಳಿಗೂ ಸಹ ಜಿಲ್ಲಾ ಹಂತದಲ್ಲಿ ವಸತಿ ಶಾಲೆ ನಿರ್ವಹಣಾ ಸಮಿತಿ ಗಳನ್ನು ರಚಿಸಿದಲ್ಲಿ, ಸದರಿ ಸಮಿತಿಯು ಸ್ಥಳೀಯ ಹಂತದಲ್ಲಿ ವಸತಿ ಶಾಲೆ/ಕಾಲೇಜುಗಳ ಅಭಿವೃದ್ಧಿ ಹಾಗೂ ನಿರ್ವಹಣೆಯ ಕುರಿತು ಕಾಲಕಾಲಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಸಲಹೆಗಳನ್ನು ನೀಡಿದಲ್ಲಿ, ಸಂಘದ ವಸತಿ ಶಾಲೆಗಳನ್ನು ಸಹ ಜವಾಹರ್ ನವೋದಯ ವಿದ್ಯಾಲಯಗಳ ಮಾದರಿಯಲ್ಲಿಯೇ ಉತ್ಕೃಷ್ಟ ಮಟ್ಟದಲ್ಲಿ ಸಜ್ಜುಗೊಳಿಸಬಹುದಾಗಿರುತ್ತದೆ. ಜವಾಹರ್ ನವೋದಯ ವಿದ್ಯಾಲಯ ಶಾಲೆಗಳಲ್ಲಿ ಜಾರಿಯಲ್ಲಿರುವ ವಿದ್ಯಾಲಯ ನಿರ್ವಹಣಾ ಸಮಿತಿ ಮಾದರಿಯಲ್ಲಿಯೇ, ಕರ್ನಾಟಕ ವಸತಿ ಶಿಕ್ಷಣ

ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ / ಕಾಲೇಜುಗಳ ವಿದ್ಯಾರ್ಥಿಗಳಿಗೆ ಉತ್ಕೃಷ್ಟ ಮಟ್ಟದ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿ, ಸದರಿ ವಸತಿ ಶಾಲೆ/ಕಾಲೇಜುಗಳನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ/ ನಿರ್ವಹಣೆ ಮಾಡಲು ಜಿಲ್ಲಾ ಹಂತದಲ್ಲಿ ವಸತಿ ಶಾಲೆ ನಿರ್ವಹಣಾ ಸಮಿತಿ ಗಳನ್ನು ರಚಿಸಿ ಅಧಿಕಾರ/ಕರ್ತವ್ಯಗಳನ್ನು ನಿಗಧಿಪಡಿಸಿ ಅಧಿಕೃತ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೇಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ಸಕಇ 316 ಮೊದೇಶಾ 2020, ದಿನಾಂಕ:16.10.2020 ರ ಆದೇಶವನ್ನು ಹಿಂಪಡೆದು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 466 ಮೊದೇಶಾ 2021, ಬೆಂಗಳೂರು, ದಿನಾಂಕ:10-11-2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಜವಾಹರ್ ನವೋದಯ ವಿದ್ಯಾಲಯ ಶಾಲೆಗಳಲ್ಲಿ ಜಾರಿಯಲ್ಲಿರುವ ವಿದ್ಯಾಲಯ ನಿರ್ವಹಣಾ ಸಮಿತಿ ಮಾದರಿಯಲ್ಲಿಯೇ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ / ಕಾಲೇಜುಗಳ ವಿದ್ಯಾರ್ಥಿಗಳಿಗೆ ಉತ್ಕೃಷ್ಟ ಮಟ್ಟದ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿ, ಸದರಿ ವಸತಿ ಶಾಲೆ/ ಕಾಲೇಜುಗಳನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ/ ನಿರ್ವಹಣೆ ಮಾಡಲು ಜಿಲ್ಲಾ ಹಂತದಲ್ಲಿ ಈ ಕೆಳಕಂಡ ಅಧಿಕಾರಗಳನ್ನೊಳಗೊಂಡ ವಸತಿ ಶಾಲೆ ನಿರ್ವಹಣಾ ಸಮಿತಿಯನ್ನು ರಚಿಸಿ ಆದೇಶಿಸಿದೆ.

ಮುಂದುವರೆದು, ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯ ಅಧಿಕಾರ / ಕರ್ತವ್ಯಗಳನ್ನು ಅನುಬಂಧದಲ್ಲಿ ನಮೂದಿಸಿರುವಂತೆ ನಿಗಧಿಪಡಿಸಿದೆ.

**-: ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿ:-**

| ಕ್ರ ಸಂ | ಪದನಾಮ | ಹುದ್ದೆ |
|---|---|---|
| 1. | ಜಿಲ್ಲಾಧಿಕಾರಿಗಳು/ಜಿಲ್ಲಾ ದಂಡಾಧಿಕಾರಿಗಳು | ಅಧ್ಯಕ್ಷರು |
| 2. | ಮುಖ್ಯಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ | ಉಪಾಧ್ಯಕ್ಷರು |
| 3. | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 4. | ಜಿಲ್ಲಾ ಆರೋಗ್ಯ ಅಧಿಕಾರಿ | ಸದಸ್ಯರು |
| 5. | ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 6. | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಸದಸ್ಯರು |
| 7. | ಜಿಲ್ಲಾ ಅಧಿಕಾರಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ. | ಸದಸ್ಯರು |
| 8. | ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

| | | |
|---|---|---|
| 9-10 | ಪೋಷಕ ವರ್ಗದಿಂದ ಇಬ್ಬರು ಪ್ರತಿನಿಧಿಗಳು (ಅಧ್ಯಕ್ಷರು, ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿ ರವರ ಅನುಮೋದನೆಯೊಂದಿಗೆ ಒಬ್ಬ ಪುರುಷ ಮತ್ತು ಒಬ್ಬ ಮಹಿಳಾ ಪೋಷಕರ ನಾಮನಿರ್ದೇಶನ ಮಾಡುವುದು) | ಸದಸ್ಯರು |
| 11-12 | ಇಬ್ಬರು ಹಿರಿಯ ಅನುಭವಿ ಪ್ರಾಂಶುಪಾಲರು | ಸದಸ್ಯರು |
| 13. | ಜಂಟಿ/ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/11/2021

(ಪಿ.ಎನ್.ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು
8. ಎಲ್ಲಾ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
9. ವಸತಿ ಶಾಲೆ ನಿರ್ವಹಣಾ ಸಮಿತಿಯ ಸದಸ್ಯರಿಗೆ (ಕ್ರ.ಸಂ.6 ರಿಂದ 9 ರವರಗೆ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರ ಮುಖಾಂತರ )
10. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ-2, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕ, ವಿಕಾಸಸೌಧ.

****

## ಸರ್ಕಾರಿ ಆದೇಶ ಸಂಖ್ಯೆ: ಸಕಇ 466 ಮೊದೇಶಾ 2021, ಬೆಂಗಳೂರು, ದಿನಾಂಕ:10-11-2021

## ಅನುಬಂಧ

**ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯ ಅಧಿಕಾರಗಳು/ಕರ್ತವ್ಯಗಳು:**

1. ಜಂಟಿ / ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರು ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯನ್ನು ರಚಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು.
2. ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯ ಅಧಿಕಾರಾವಧಿಯು ಮೂರು ವರ್ಷಗಳಾಗಿರುತ್ತದೆ. ಸದರಿ ಸಮಿತಿಗೆ ಹೊಸ ಸದಸ್ಯರು ಆಯ್ಕೆಯಾಗುವವರೆಗೂ, ಅಸ್ತಿತ್ವದಲ್ಲಿರುವ ಸಮಿತಿಯು ಮುಂದುವರೆಯುವುದು.
3. ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯ ಸದಸ್ಯರುಗಳು ಪುನರ್ ನಾಮನಿರ್ದೇಶನ ಹೊಂದಲು ಅರ್ಹರಿರುತ್ತಾರೆ.
4. ಅಧ್ಯಕ್ಷರು, ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿ ರವರ ಅನುಮೋದನೆಯೊಂದಿಗೆ ಒಬ್ಬ ಪುರುಷ ಮತ್ತು ಒಬ್ಬ ಮಹಿಳಾ ಪೋಷಕರನ್ನು ನಾಮನಿರ್ದೇಶಿಸುವುದು.
5. ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ತಮ್ಮ ಅಧಿಕಾರದಡಿಯಲ್ಲಿ ಸ್ಥಳೀಯ ಹಿರಿಯ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡುವುದು.
6. ಜಿಲ್ಲಾ ವಸತಿ ಶಾಲೆ ನಿರ್ವಹಣಾ ಸಮಿತಿಯು ವರ್ಷಕ್ಕೆ ಕನಿಷ್ಟ 3 ಬಾರಿ ಸಭೆ ಸೇರುವುದು ಹಾಗೂ ಅಧ್ಯಕ್ಷರ ಸೂಚನೆಯ ಮೇರೆಗೆ ವಿಶೇಷ ಸಭೆಗಳನ್ನು ಅವಶ್ಯಕ ಸಂದರ್ಭಗಳಲ್ಲಿ ಕರೆಯುವುದು.
7. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಬಿಡುಗಡೆಗೊಳಿಸಲಾದ ಅನುದಾನದ ಮೊತ್ತವನ್ನು ಸಮರ್ಪಕವಾಗಿ ಬಳಕೆ ಮಾಡುವುದರ ಜೊತೆಗೆ, ಅನವಶ್ಯಕ ವೆಚ್ಚಗಳಿಗೆ ಕಡಿವಾಣ ಹಾಕುವುದು.
8. ಮುಂದಿನ ಆರ್ಥಿಕ ವರ್ಷಕ್ಕೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸುವುದು. ಆವರ್ತಕ ವೆಚ್ಚಗಳ ಕುರಿತು ಸಲಹೆಗಳನ್ನು ನೀಡುವುದು.
9. ವಸತಿ ಶಾಲೆ/ಕಾಲೇಜುಗಳಿಗೆ ಅಗತ್ಯವಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಸಂಘದ ಸೂಚನೆಯ ಮೇರೆಗೆ ನೇಮಕ ಮಾಡುವುದು.
10. ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು, ಊಟೋಪಚಾರ ವ್ಯವಸ್ಥೆಯು ಸಮರ್ಪಕವಾಗಿರುವ ಬಗ್ಗೆ ಹಾಗೂ ವಿದ್ಯಾರ್ಥಿಗಳು ಮತ್ತು ವಸತಿ ಶಾಲೆ/ಕಾಲೇಜು ಸಿಬ್ಬಂದಿಗಳು ಶಿಸ್ತಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಆಗಿಂದಾಗ್ಗೆ ಮೇಲ್ವಿಚಾರಣೆ ಕೈಗೊಳ್ಳುವುದು.
11. ವಸತಿ ಶಾಲೆಯ ಸುಗಮ ನಿರ್ವಹಣೆ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಸ್ಥಳೀಯ ಮಟ್ಟದಲ್ಲಿ ಸಹಕಾರದೊಂದಿಗೆ ಸಮನ್ವಯ ಸಾಧಿಸುವುದು.

*****